ಪಿ.ಬಿ. ಪ್ರಸನ್ನ



‘ರಾಜೇಶಾ... ನೀನು ತುಂಬ ಲಕ್ಕೀ ಮಾರಾಯಾ... ಮದುವೆ ಆಗ್ಲಿಕ್ಕೆ ಹೆಣ್ಣೇ ಸಿಗೂದಿಲ್ಲಾಂತ ಹೇಳ್ತಾ ಇದ್ದಿ. ಈಗ ನೋಡಿದ್ರೆ ಭಾರೀ ಹಕ್ಕಿಯನ್ನೇ ಹೊಡ್ದಿದ್ದಿ. ಒಳ್ಳೇ ಆಸ್ತಿಪಾಸ್ತಿ ಇರುವಂಥವರು. ಒಬ್ಬೇ ಮಗಳು. ಒಳ್ಳೇ ಸುಂದರಿ ಬೇರೆ. ಹೀಗಿರುವಾಗ ಮಗಾ... ನಿನ್ನಷ್ಟು ಲಕ್ಕಿ ಯಾರೂ ಇಲ್ಲ’ ಅಂತ ಆಫೀಸಿನಲ್ಲಿ ಎಲ್ಲರೂ ರಾಜೇಶನನ್ನು ಕಿಚಾಯಿಸುವವರೇ. ಅದನ್ನೆಲ್ಲ ಕೇಳಿದಾಗ ಅವನಿಗೆ ತನ್ನಷ್ಟು ಲಕ್ಕಿ ಯಾರೂ ಇಲ್ಲ ಅಂತ ಅನಿಸಿ ಹೃದಯ ತುಂಬಿ ಬಂದ ಹಾಗೆ ಆಗ್ತಾ ಇತ್ತು. ತನ್ನಷ್ಟು ಅದೃಷ್ಟವಂತರು ಯಾರೂ ಇಲ್ಲ ಅಂತ ಎಣಿಸ್ತಾ ಇರ್ತಿದ್ದ.

ತುಂಬ ಕಷ್ಟದಲ್ಲಿ ಮೇಲೆ ಬಂದವ ರಾಜೇಶ. ಊರಿನಲ್ಲಿ ಒಂದಷ್ಟು ಜಾಗ ಇತ್ತು. ಕೆಲಸದವರ ಸಮಸ್ಯೆಯಿಂದಾಗಿ ಅವನಿಗೆ, ಅವನ ಮನೆಯವರಿಗೆ ಬೇಸಾಯ ಮಾಡ್ಳಿಕ್ಕೆ ಆಗ್ಲೇ ಇಲ್ಲ. ಕಾಲೇಜು ಓದುವಾಗಲೇ ಆ್ಯಕ್ಸಿಡೆಂಟಲ್ಲಿ ತನ್ನ ಅಪ್ಪನನ್ನು ಕಳಕೊಂಡಿದ್ದ. ಸಡನ್ನಾಗಿ ಅಪ್ಪ ತೀರಿಕೊಂಡಾಗ ಅವ ಕಂಗಾಲಾಗಿ ಹೋಗಿದ್ದ. ತಾನು ಇರೂದು ಬೆಂಗಳೂರಲ್ಲಿ. ಅಮ್ಮ, ಅಕ್ಕಂದಿರು ಊರಲ್ಲಿ. ಮನೆಯ ಸ್ಥಿತಿ ಹೇಗಾ ಏನಾ ಅಂತ ಮಂಡೆ ಬಿಸಿ ಮಾಡಿಕೊಂಡಿದ್ದ. ಆಗ ಅವರು, ‘ಏನೋ ಆಗಬಾರದ್ದು ಆಗಿ ಹೋಯಿತು. ಇಲ್ಲಿಯ ಪರಿಸ್ಥಿತಿಯ ಬಗ್ಗೆ ನೀನು ಮಂಡೆ ಬಿಸಿ ಮಾಡಿಕೊಳ್ಳುದೇ ಬೇಡ. ನಿಂಗೆ ಮೆರಿಟ್ ಆಧಾರದಲ್ಲಿಯೇ ಗೋರ್ಮೆಂಟ್ ಸೀಟು ಸಿಕ್ಕಿದ್ದರಿಂದ ಇಂಜಿನಿಯರಿಂಗ್ ಓದ್ಲಿಕ್ಕೆ ಅಂಥ ಖರ್ಚು ಅಂತ ಆಗೂದಿಲ್ಲ. ನೀನು ಒಳ್ಳೇ ಮಾಡಿ ಓದು. ದೊಡ್ಡ ಕಂಪನಿ ಸೇರು. ನಂತರ ಮನೆಯ ಜವಾಬ್ದಾರಿ, ಅಕ್ಕಂದಿರ ಮದುವೆ ಜವಾಬ್ದಾರಿ ತೆಕ್ಕೋ. ಇಲ್ಲಿ ನಾನು ಹಪ್ಪಳ, ಸೆಂಡಿಗೆ, ಸಾರಿನ ಪುಡಿ ಎಲ್ಲ ಮಾರಾಟ ಮಾಡಿ ನಾಕು ಕಾಸು ಸಂಪಾದನೆ ಮಾಡ್ತೇನೆ. ಪುರುಸೊತ್ತು ಇದ್ದಾಗ ಹೊಲೀತೇನೆ. ನಿನ್ನ ಅಕ್ಕಂದಿರು ನಂಗೆ ಹೊಲಿಗೆ ಕೆಲಸದಲ್ಲಿ ಸಾಯ ಮಾಡ್ತಾರೆ. ಇರ್ಲಿಕ್ಕೆ ಸ್ವಂತದ್ದು ಅಂತ ಒಂದು ಸಣ್ಣ ಮನೆ ಇರೂದರಿಂದ ಬೇರೆ ಎಂಥದೂ ತೊಂದರೆ ಇಲ್ಲ. ನೀನು ಮಂಡೆ ಬಿಸಿ ಮಾಡಿಕೊಳ್ಳುದೇ ಬೇಡ’ ಅಂತ ಧೈರ್ಯ ಹೇಳಿದ್ದರು. ಅವರು ಹೇಳಿದಂತೆ ಊರಿನಲ್ಲಿ ಅವರ ಹಪ್ಪಳ, ಸೆಂಡಿಗೆಯ ವ್ಯಾಪಾರ, ಹೊಲಿಗೆಯ ಕೆಲಸ ಎಲ್ಲ ಚೆನ್ನಾಗಿಯೇ ನಡೀತಾ ಇತ್ತು.

ಅಮ್ಮ–ಅಕ್ಕಂದಿರ ಆಸೆಯಂತೆ ರಾಜೇಶ ಚಂದ ಮಾಡಿ ಓದಿ ಇಂಜಿನಿಯರಿಂಗ್ ಮುಗಿಸಿದ. ಫೈನಲ್ ಇಯರ್‌ನಲ್ಲಿ ಇರೂವಾಗಲೇ ಒಳ್ಳೆಯ ಕಂಪನಿಯಲ್ಲಿ ಕೆಲಸ ಸಿಕ್ಕಿತು. ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ಹೈಯೆಸ್ಟ್ ಪ್ಯಾಕೇಜ್ ಸಿಕ್ಕಿದ್ದು ಇವನಿಗೇ ಆಗಿತ್ತು.

ಸಂಬಳ ಆದ ಹಾಗೆ ರಾಜೇಶ ಊರಿನ ತನ್ನ ಮನೆಯ ಸುಧಾರಣೆಯ ಕೆಲಸಕ್ಕೆ ಕೈ ಹಾಕಿದ. ಮನೆಯನ್ನು ರಿಪೇರಿ ಮಾಡಿಸಿಕೊಂಡ. ಮನೆಗೆ